ನೀಡಿರುವ ಸಹಾಯಧನ ಡಿಸೆಂಬರ್ ೧೯೩೫ರ ಅಂತ್ಯದವರೆಗೆ ರೂ. ೩೦,೯೯,೨೯,೭೯೯ ಆಗಿರುತ್ತದೆ. (ಸಾಗಾಣಿಕೆ ವೆಚ್ಚ ಸೇರಿ).

ಶ್ರೀ ಆರ್. ನಾರಾಯಣ.—ಮಾನ್ಯ ಅಧ್ಯಕ್ಷರೇ ಉತ್ತರದಲ್ಲಿ ೫೧.೬೨ ಲಕ್ಷ ಕುಟುಂಬಗಳವರು ತ್ರಿವರ್ಣ ಕಾರ್ಡ್‌ಗಳನ್ನು ಪಡೆಯಲಿಕ್ಕೆ ಅರ್ಹರಾಗಿದ್ದಾರೆ ಎಂದು ಸರ್ವೆಯಿಂದ ತಿಳಿದು ಬಂದಿದೆ ಎಂದು ಹೇಳಿದ್ದಾರೆ. ಆದರಲ್ಲಿ ೪೭.೨೧ ಲಕ್ಷ ಕುಟುಂಬಗಳಿಗೆ ಈಗಾಗಲೇ ಕಾರ್ಡ್‌ಗಳನ್ನು ಕೊಡ ಲಾಗಿದೆ ಹಾಗೂ ೪.೪೧ ಲಕ್ಷ ಬಾಕಿ ಇದೆ ಎಂದು ಹೇಳಿದ್ದಾರೆ. ಈ ತ್ರಿವರ್ಣ ಕಾರ್ಡ್ ಪಡೆದಿರ ತಕ್ಕಂಥವರಿಗೆ ತಮಗೆ ಗೊತ್ತಿರುವ ಪ್ರಕಾರ ಮುಂದಿನ ತಿಂಗಳಿನಿಂದ ಸಹಾಯಧನ ರೂಪದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುತ್ತಾ ಇದ್ದೀರಿ. ಮಾನ್ಯ ಅಧ್ಯಕ್ಷರೇ ನನ್ನ ಒಂದು ಪ್ರಶ್ನೆ ಇತ್ತೀಚೆಗೆ ಸರ್ಕಾರ ಬಜೆಟ್‌ನಲ್ಲಿ ಪ್ರಕಟಿಸಿದಂತೆ ಒಂದು ರೂಪಾಯಿ ಅಕ್ಕಿ ಮೇಲೂ, ೫೦ ಪೈಸೆ ಗೋಧಿಯ ಮೇಲೂ ತ್ರಿವರ್ಣ ಕಾರ್ಡ್ ಹೋಲ್ಡರ್ಸ್‌ಗೆ ಸಹಾಯಧನ ಕೊಟ್ಟಿರತಕ್ಕಂಥಾದ್ದು ಬಹಳ ಸಹಾಯಕವಾಗಿದೆ. ಈಗ ಏನು ಆಗಿದೆ ಅಂದರೆ ಈ ರೆಡ್ ಕಾರ್ಡ್ ಮತ್ತು ಕೇಸರಿ ಕಾರ್ಡ್ ಅಂತ ನಾವು ಏನು ಹೇಳುತ್ತೇವೆ ಅದನ್ನು ಪಡೆದಿರತಕ್ಕಂಥವರಿಗೆ ೭ ರೂಪಾಯಿ ೫ ಪೈಸೆಗೆ ಒಂದು ಕೆ.ಜಿ. ಅಕ್ಕಿಗೆ ೪–೫೫ ಪೈಸೆಗೆ ಒಂದು ಕೆ.ಜಿ. ಗೋಧಿಯನ್ನು ಕೊಡುತ್ತಿದ್ದೀರಿ. ಓಪನ್ ಮಾರ್ಕೆಟ್‌ನಲ್ಲಿ ಅಕ್ಕಿಯ ಬೆಲೆ ೬–೫೦ ಪೈಸೆ ಇದೆ. ಮತ್ತು ಗೋಧಿ ೫ ರೂಪಾಯಿಗಳಿಂದ ೭ ರೂಪಾಯಿಗಳವರೆಗೂ ಇದೆ ಎಂದು ತಿಳಿದು ಬಂದಿದೆ. ಆದ್ದರಿಂದ ಯಾರು ಕೆಂಪು ಅಥವಾ ಕೇಸರಿ ಕಾರ್ಡ್‌ಗಳನ್ನು ಪಡೆದಿದ್ದಾರೆ ಅವರಿಗೂ ಅಕ್ಕಿಗೆ ಒಂದು ರೂಪಾಯಿ ಗೋಧಿಗೆ ೫೦ ಪೈಸೆಯನ್ನು ಕಡಿಮೆ ಮಾಡಬೇಕು. ಈಗ ರಿಟೈಲ್ ಓನರ್ಸ್ ಏನು ಇದ್ದಾರೆ. ಅವರು ಯಾರು ಲಿಫ್ಟ್ ಮಾಡುತ್ತಿಲ್ಲ. ಕಾರಣ ಏನೆಂದರೆ, ಅವರು ಲಿಫ್ಟ್ ಮಾಡಿದಂತಹ ಸಗಿರು ಕಾರ್ಡ್‌ದಾರರಿಗೆ ಇತ್ತೀಚೆಗೆ ಏನೋ ಸ್ವಲ್ಪ ತೆಗೆದುಕೊಂಡು ಹೋಗತಕ್ಕಂಥ ಪರಿಪಾಠ ಆಗಿದೆ. ಕತವೆ ದುಡ್ಡು ಆದಮೇಲೆ, ಆದರೆ ಕೆಂಪು ಕಾರ್ಡ್‌ದಾರರೊಬ್ಬರೂ ತೆಗೆದುಕೊಂಡು ಹೋಗುತ್ತಿಲ್ಲ. ಆದ್ದರಿಂದ ರಿಟೈಲ್ ಲಿಫ್ಟಿಂಗ್ ಪಾಯಿಂಟ್ ಸ್ವಲ್ಪ ಇಂಪ್ರೂವ್ ಆಗುವ ದೃಷ್ಟಿಯಿಂದ ಮತ್ತು ಏನು ಸೆಂಟ್ರಲ್ ಗವರ್ನಮೆಂಟ್‌ನವರು ಸೆಂಟ್ರಲ್ ಪೂಲ್‌ನಿಂದ ಆಹಾರ ಧಾನ್ಯಗಳನ್ನು ಒದಗಿಸುತ್ತಾರೆ, ಆ ಅಕ್ಕಿ ಮತ್ತು ಗೋಧಿಯನ್ನು ಸಂಪೂರ್ಣವಾಗಿ ಬಳಕೆ ಮಾಡುವ ದೃಷ್ಟಿಯಿಂದ ಸರ್ಕಾರ ಈ ತ್ರಿವರ್ಣ ಕಾರ್ಡ್‌ದಾರರಿಗೆ ಕೊಟ್ಟಂತಹ ರಿಯಾಯ್ತಿ ದರದಲ್ಲಿ ಅಕ್ಕಿ ಮೇಲೆ ಒಂದು ರೂಪಾಯಿ ಗೋಧಿ ಮೇಲೆ ೫೦ ಪೈಸೆ ಕಡಿಮೆ ಮಾಡುವುದು ಬಹಳ ಸೂಕ್ತ ಮತ್ತು ಇತ್ತೀಚೆಗೆ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ನನಗೆ ತಿಳಿದ ಪ್ರಕಾರ ಸಕ್ಕರೆ ಪ್ರಮಾಣ ಸೆಂಟ್ರಲ್ ಕೋಟಾದಲ್ಲಿ ಇತ್ತೀಚೆಗೆ ೫ ಪರ್ಸೆಂಟ್ ಕಡಿಮೆ ಆಗುತ್ತಾ ಇದೆಯೆಂದು ವರದಿ ಬಂದಿದೆ. ಈಗ ನಾವು ಒಂದು ಕೆ.ಜಿ. ಸಕ್ಕರೆಯನ್ನು ಸಹ ಗ್ರಾಮಾಂತರ ಪ್ರದೇಶದ ಕಾರ್ಡ್‌ದಾರರಿಗೆ ಕೊಡಲು ಆಗುತ್ತಿಲ್ಲ. ಈ ದೃಷ್ಟಿಯಿಂದ ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕು ಮತ್ತು ಈ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸ ಬೇಕು.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ ಈ ತ್ರಿವರ್ಣ ಚೀಟಿ ಪಡೆತರದಾರರಿಗೆ ಕೆ ಸುವಷ್ಟೇ ನಮ್ಮ ಕೇಸರಿ ಕಾರ್ಡ್‌ನವರಿಗೂ ದರ ಕಡಿಮೆ ಮಾಡಬೇಕು ಅಂತ ಮಾನ್ಯ ಸದಸ್ಯರ ಬೇಡಿಕೆ ಏನಿದೆ, ಈ ಬಗ್ಗೆ ಈಗಾಗಲೇ ನಮ್ಮ ರಾಜ್ಯಸರ್ಕಾರ ೩೦ ಕೋಟಿ ೯೯ ಲಕ್ಷ ೨೯ ಸಾವಿರ ೭೯೯ ರೂಪಾಯಿಗಳಷ್ಟು ಹಣ ಖರ್ಚು ಮಾಡುತ್ತಿದೆ. ಆರ್ಥಿಕ ಇಲಾಖೆ ಒಪ್ಪಿದರೆ ಬೇರೆಯವರಿಗೂ ಕೊಡಲು ನನ್ನದೇನೂ ಅಭ್ಯಂತರ ಇಲ್ಲ. ಆದರೆ ನಾನಾಗಿಯೇ ಆಶ್ವಾಸನೆ ಕೊಡಲಿಕ್ಕೆ ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಅವರು ಒಪ್ಪಿದರೆ ಇದನ್ನು ಕೊಡಲಿಕ್ಕೆ ಸಾಧ್ಯ.

ಶ್ರೀ ಆರ್. ನಾರಾಯಣ್.—ಆಗಬಹುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೊಸ ಬಡಾವಣೆಗಳ ನಿರ್ಮಾಣ ಕುರಿತು

೨೫೯ (೦೦೬) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ). —ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೊಸ ಬಡಾವಣೆಗಳ ನಿರ್ಮಾಣ ಮಾಡಲು ಸರ್ಕಾರ ಯೋಚಿಸಿದೆಯೇ ?

ಆ) ಬೆಂಗಳೂರು ನಗರದಲ್ಲಿ ನಿವೇಶನಗಳ ಬೇಡಿಕೆ ಎಷ್ಟಿದೆ ?

ಇ) ನಿವೇಶನಗಳಿಗಾಗಿ ಬೆಂಗಳೂರು ಪ್ರಾಧಿಕಾರಕ್ಕೆ ಎಷ್ಟು ಜನ ಅರ್ಜಿಗಳನ್ನು ಸಲ್ಲಿಸಿದ್ದಾರೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) ಇವರ ಪರವಾಗಿ ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ಬೆಂಗಳೂರು ನಗರದಲ್ಲಿ ನಿವೇಶನ ರಹಿತರು ಎಷ್ಟು ಇದ್ದಾರೆ ಎಂಬುದರ ಬಗ್ಗೆ ಸರ್ವೆ ಮಾಡಿರುವುದಿಲ್ಲ. ಹೀಗಾಗಿ ಈ ಮಾಹಿತಿ ತಕ್ಷಣ ಲಭ್ಯವಿರುವುದಿಲ್ಲ.

ಇ) ಒಟ್ಟು ೮೬,೯೮೮ ಜನ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನಿವೇಶನಗಳಿಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಹಾಕಿರತಕ್ಕಂಥವರು ೮೬ ಸಾವಿರದ ೯೮೮ ಜನ ಎಂದು ಹೇಳಿದ್ದಾರೆ. ಈ ೮೬ ಸಾವಿರದ ೯೮೮ ಜನ ಯಾವಾಗ ಅರ್ಜಿಸಲ್ಲಿಸಿದರು ? ಅರ್ಜಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕರೆದರು ಈ ೮೬ ಸಾವಿರ ಜನರಿಂದ ಎಷ್ಟು ಹಣವನ್ನು ಕಟ್ಟಿಸಿಕೊಂಡಿದ್ದಾರೆ ? ಈ ಹಣಕ್ಕೆ ಏನಾದರೂ ಬಡ್ಡಿಯನ್ನು ಕೊಡುತ್ತಿದ್ದೀರಾ ? ಮತ್ತು ತಾವು ಈ ೮೬ ಸಾವಿರ ಜನಕ್ಕೆ ಪ್ರಾಮಾಣಿಕವಾಗಿ ನೀವು ನಿವೇಶನಗಳನ್ನು ಯಾವಾಗ ಕೊಡಬೇಕೆಂದು ನಿರ್ಧಾರ ಮಾಡಿದ್ದೀರಿ ಎಂಬ ಬಗ್ಗೆ ಪ್ರಾಮಾಣಿಕವಾದಂತಹ ಹೇಳಿಕೆ ಕೊಡಬೇಕು. ಸುಮ್ಮನೆ ನೀವು ಹಾರಿಕೆ ಹೇಳಿಕೆ ಕೊಟ್ಟರೆ ಆಗುವುದಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ಸರ್ಕಾರದ ಪರವಾಗಿ ಹೇಳತಕ್ಕಂಥ ಉತ್ತರಗಳನ್ನೆಲ್ಲಾ ಪ್ರಾಮಾಣಿಕವಾಗಿಯೇ ಕೊಡುತ್ತೇವೆ. ಮಾನ್ಯ ಸದಸ್ಯರು ಕೇಳಿದಹಾಗೆ ೧೯೮೮ ಅಕ್ಟೋಬರ್‌ನಲ್ಲಿ ಪ್ರಕಟಣೆ ನೀಡಿ ೩೫೦೦ ನಿವೇಶನಗಳ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಈ ಆಹ್ವಾನದ ಆಧಾರದ ಮೇಲೆ ೮೬ ಸಾವಿರದ ೯೮೮ ಅರ್ಜಿಗಳು ಸ್ವೀಕೃತವಾಗಿವೆ. ಆದರೆ ಕಳೆದ ಐದು ವರ್ಷಗಳಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪ್ರಗತಿ ಇಲ್ಲದಿರುವುದರಿಂದ ಈ ಅರ್ಜಿದಾರರಿಗೆ ನಿವೇಶನ ಹಂಚಿಕೆ ಮಾಡಲು ಸಾಧ್ಯವಾಗಿರುವುದಿಲ್ಲ. ಈಗ ಭೂ ಸ್ವಾಧೀನ ಪ್ರಕ್ರಿಯೆ ಚುರುಕುಗೊಂಡಿದೆ. ಅದರ ಆಧಾರದ ಮೇಲೆ ಆದಷ್ಟು ಬೇಗ ಈ ಹಂಚಿಕೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ವಾಟಾಳ್ ನಾಗರಾಜ್.—ನಾನು ಕೇಳಿದ್ದು ೮೬ ಸಾವಿರ ಜನರಿಗೆ ಯಾವಾಗ ನೀವು ನಿವೇಶನ ಕೊಡುತ್ತೀರಾ ಎಂಬ ನೇರವಾದ ಪ್ರಶ್ನೆ. ಅವರಿಂದ ೮೬ನೇ ಇಸವಿಯಲ್ಲಿ ಅರ್ಜಿಗಳನ್ನು ನೀವು ತೆಗೆದುಕೊಂಡಿದ್ದೀರಿ. ಈಗ ೯೪ನೇ ಇಸವಿ. ಅಂದರೆ ೬ ವರ್ಷ ಆಯಿತು, ಈ ಅವಧಿಗೆ ಅವರಿಗೆ ಬಡ್ಡಿ ಇಲ್ಲ, ಅವರ ಹಣಕ್ಕೆ ಗ್ಯಾರಂಟಿ ಇಲ್ಲ. ನೀವು ನಿವೇಶನ ಕೊಡುತ್ತೀರ ಎಂಬ ಭರವಸೆ ಇಲ್ಲ ಮತ್ತು ಹೊಸ ಬಡಾವಣೆಗಳ ನಿರ್ಮಾಣಕ್ಕೆ ನಿಮ್ಮಲ್ಲಿ ಜಾಗ ಇಲ್ಲ. ಬೆಂಗಳೂರು ಪ್ರಾಧಿಕಾರದವರು ಸುಮ್ಮನೆ ಮೂಲೆ ನಿವೇಶನ ಪಡೆದುಕೊಂಡು ಸಂಬಳ ಸಾರಿಗೆ ಹಂಚಿಕೊಂಡು ಬಂದು ರೀತಿ ದಿವಾಳಿ ಎದ್ದು ಹೋಗಿದೆ. ಹೀಗಿರುವಾಗ ೮೬ ಸಾವಿರ ಜನರಿಗೆ ನಿವೇಶನ ಎಲ್ಲಿ ಕೊಡುತ್ತೀರಿ ? ಅದಕ್ಕೇ ನಾನು ಪ್ರಾಮಾಣಿಕವಾಗಿ ಎಂದು ಹೇಳಿದೆ. ಆದರೆ ನೀವು ಹೇಳುವುದೆಲ್ಲ ಪ್ರಾಮಾಣಿಕವೇ ಎಂದು ಹೇಳಿ ಬಿಡುತ್ತೀರಿ. ಆದರೆ ನಿಮ್ಮಲ್ಲಿ ಜಾಗ ಎಲ್ಲಿದೆ ? ಅದರ ಬಡಾವಣೆಗೆ ಏನು ಯೋಜನೆ ಮಾಡಿದ್ದೀರಿ ಹಾಗೂ ಅದಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ ? ಈ ೮೬ ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ನಿಮ್ಮಲ್ಲಿರುವ ತಕ್ಷಣದ ಯೋಜನೆಗಳೇನು ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—೮೬ ಸಾವಿರ ಅರ್ಜಿಗಳು ಬಂದಿವೆ. ಆದರೆ ಪ್ರಾಧಿಕಾರ ಕೂಡ ಮಾಡಿದ್ದು ೩೫೦೦ ನಿವೇಶನಗಳು ಮಾತ್ರ. ಈಗಿನ ಪರಿಸ್ಥಿತಿ ಎಂದರೆ ಜ್ಞಾನಭಾರತಿ ಬಡಾವಣೆಯಲ್ಲಿ ೩೦೦ ಎಕರೆಜಮೀನನ್ನು ಅಂತಿಮ ಅಧಿಸೂಚನೆಯಾಗಿ ಸ್ವಾಧೀನಕ್ಕೆ ತೆಗೆದುಕೊಂಡಿದೆ, ಮತ್ತೆ ಜೆಪಿ ನಗರದ ೯ನೇ ಹಂತದಲ್ಲಿ ಭೂ ಸ್ವಾಧೀನದ ಪ್ರಕ್ರಿಯೆಯೆಲ್ಲ ಪೂರ್ಣವಾಗಿ ೧೦೦ ಎಕರೆಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿದೆ. ಈ ೬೦೦ ಎಕರೆ ಜೊತೆಗೆ ಸುಮಾರು ೩೮೦೦ ಎಕರೆ ಜೆ.ಪಿ. ನಗರದ ೭ ಮತ್ತು ೮ನೇ ಹಂತ ಮತ್ತು ಬನಶಂಕರಿ ೫ನೇ ಹಂತದಲ್ಲಿ ಕೊನೆಯ ಭೂ ಸ್ವಾಧೀನತೆಯ ಅವಾರ್ಡ್ ಆಗುವ ಹಂತದಲ್ಲಿದೆ. ಅಂದರೆ ಒಟ್ಟು ೪೪೩೫ ಎಕರೆ ೦೮ ಗುಂಟೆ ಪ್ರದೇಶ ಇನ್ನು ಆರು ತಿಂಗಳಲ್ಲಿ ಹಂಚಿಕೆಯಾಗಬಹುದೆಂದು ನನಗೆ ಬಂದಿರುವ ವರದಿ ಆಧಾರದ ಮೇಲೆ ಹೇಳುತ್ತಿದ್ದೇನೆ. ಇದಲ್ಲದೆ ಪ್ರಾಥಮಿಕ ಪ್ರಕಟಣೆ ಆಗಿರುವುದು ೧೧,೯೩೭ ಎಕರೆ ೧೧ ಗುಂಟೆಗೆ. ೧೪ ಪ್ರದೇಶಗಳ ಈ ಜಾಗಗಳು ಇದ್ದು ಕೊನೆಯ ಪ್ರಕಟಣೆಗೆ ಕಾದಿದೆ. ಅದು ಪರಿಶೀಲನೆಯ ವಿವಿಧ ಹಂತದಲ್ಲಿದೆ. ತಮಗೆ ಗೊತ್ತಿರುವ ಹಾಗೆ ಪ್ರಾಥಮಿಕ ಅಧಿಸೂಚನೆಯಾದ ಮೇಲೆ ಕೊನೆಯ ನೋಟೀಫಿಕೇಶನ್

ಆಗುವ ಮುಂಚೆ ಆದರ ಆಳತೆ, ಗಡಿ ನಿಷ್ಕರ್ಷ ಆಗಿ, ಪ್ರಕಟಣೆ ಹೊರಟು ಪರಿಹಾರ ನಿಗದಿ ಮಾಡಿ ಸ್ವಾಧೀನತೆ ಪಡೆಯಬೇಕು. ಈ ಕೆಲಸ ನಡೆದಿದೆ. ಇದು ಬಹಳ ಬೇಗ ಆಗಲು ಒತ್ತಾಯವನ್ನು ಹಾಕಲಾಗಿದೆ. ಮತ್ತೆ ಈ ೪ ಸಾವಿರ ಎಕರೆ ಜಮೀನಿನ ಸ್ವಾಧೀನ ಕೊನೇ ಹಂತವನ್ನು ತಲುಪಿರುವುದರಿಂದ ೬ ತಿಂಗಳ ಒಳಗೆ ೬೦೦ ಜನರಿಗೆ ನಿವೇಶನ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಇದಲ್ಲದೆ, ತಮ್ಮ ಅವಗಾಹನೆಗೆ ತರುವುದಾದರೆ ೩೨ ಸಹಕಾರಿ ಸಂಘಗಳು ಯಾವುವು ಸ್ವಾಧೀನತೆ ಪಡೆದಿವೆಯೋ, ಅದನ್ನು ಅವೇ ಹಂಚಿಕೆ ಮಾಡಲು ಅಧಿಕಾರವನ್ನು ಈಗಾಗಲೇ ಕೊಡಲಾಗಿದೆ. ಆ ಮೂಲಕ ೩೦ ಸಹಸ್ರ ಜನರಿಗೆ ನಿವೇಶನ ಕೊಡಲು ಅವಕಾಶ ಇದೆ. ಅದಲ್ಲದೆ ಬಿ.ಡಿ.ಎ. ನಿಂದ ನೇರವಾಗಿ ಸುಮಾರು ೧೫ ಸಾವಿರ ಎಕರೆಯಲ್ಲಿ ನಿವೇಶನಗಳನ್ನು ವಿಂಗಡಿಸಿ ಹಂಚಲು ಬಹಳ ವೇಗದಿಂದ ಏರ್ಪಾಡು ನಡೆಯುತ್ತಿದೆ. ತಾವು ಹೇಳಿರುವುದು ನಿಜ, ಈಗ ಐದಾರು ವರ್ಷಗಳಿಂದ ನಿವೇಶನಗಳ ಹಂಚಿಕೆ ಪ್ರಾಧಿಕಾರದಿಂದ ಬಹಳ ನಿಧಾನವಾಗಿದೆ. ಇದು ಆಗಬಾರದಿತ್ತು. ಈಗ ಬಹಳ ವೇಗದಿಂದ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಪ್ರಾಧಿಕಾರ ಪ್ರಾರಂಭ ಮಾಡಿದೆ. ತಮ್ಮ ಕಳಕಳಿ ಸರ್ಕಾರಕ್ಕೆ ಅರ್ಥವಾಗುತ್ತದೆ. ಆದ್ದರಿಂದ ನಾನು ಹೇಳಿರುವ ಉತ್ತರ ಪ್ರಾಮಾಣಿಕವಾಗಿದೆ ಎಂದು ತಾವು ನಂಬಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನನಗನ್ನಿಸುತ್ತದೆ ೮೮ ಸಾವಿರ ಜನರಿಗೆ ನಿವೇಶನಗಳನ್ನು ನೀವು ಈಗ ಹೇಳಿರುವ ಪ್ರಕ್ರಿಯೆ ಮೂಲಕ ಒದಗಿಸುತ್ತೇವೆಂಬುದು ಬ್ರಹ್ಮ ಬಂದರೂ ಸಾಧ್ಯವಿಲ್ಲ. ನಾನು ಪ್ರಾಮಾಣಿಕತೆ ಅಂತ ಏಕೆ ಹೇಳಿದೆ ಎಂದರೆ ನಿಮಗೆ ಇಷ್ಟು ದಿವಸದಲ್ಲಿ ನಾವು ಹಂಚುತ್ತೇವೆಂಬ ಆತ್ಮ ವಿಶ್ವಾಸ ಬೇಕು, ಅದಕ್ಕೆ ನಿಮಗೆ ಜಾಗ ಬೇಕು, ಜಾಗ ನಿಮ್ಮಲ್ಲಿಲ್ಲ. ಪ್ರಕ್ರಿಯೆ ಅಂತ ಏನು ಹೇಳುತ್ತಿದ್ದೀರಿ ಇದಕ್ಕೆ ಎಷ್ಟೋ ಜನ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದಿದ್ದಾರೆ, ಹೀಗೆ ಅನೇಕ ರೀತಿಯಲ್ಲಿ ನೀವು ಗೊಂದಲಕ್ಕೆ ಸಿಕ್ಕಿದ್ದೀರಿ. ಆ ಜನಕ್ಕೆ ಸೈಟ್ ಹಂಚುವ ಪರಿಸ್ಥಿತಿಯಲ್ಲಿ ನೀವಿಲ್ಲ. ಅಧ್ಯಕ್ಷರೇ, ೨೦ ವರ್ಷದಿಂದ ಅರ್ಜಿ ಹಾಕಿರುವವರು ಇದ್ದಾರೆ, ಅವರಿಗೆ ಇನ್ನೂ ನಿವೇಶನ ದೊರಕುವಂತಹ ಪರಿಸ್ಥಿತಿ ಇಲ್ಲ. ೮೮ ಸಾವಿರ ಜನ ಅರ್ಜಿದಾರರು ಕೊಟ್ಟ ಹಣ ಎಲ್ಲಿಟ್ಟಿದ್ದೀರಿ ನೀವು ? ಈ ಹಣಕ್ಕೆ ಬಡ್ಡಿ ಏನು ಕೊಡುತ್ತಿದ್ದೀರೆಂದು ನಾನು ನೇರವಾಗಿ ಕೇಳುತ್ತಿದ್ದೇನೆ, ಮೊತ್ತೊಂದು ವಿಚಾರ ಇವರು ಹೇಳಿದರು. ಗೃಹನಿರ್ಮಾಣ ಸಹಕಾರ ಸಂಘಗಳು ೩೦ ಸಾವಿರ ನಿವೇಶನಗಳನ್ನು ಹಂಚುತ್ತಾರೆಂದು. ಇವತ್ತು ನಿಮ್ಮ ಪ್ರಾಧಿಕಾರಕ್ಕೆ ಗೃಹಣ ಹಿಡಿದಿರುವುದು ಈ ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘದವರಿಂದ. ಈ ಊರ ಸುತ್ತ ಇರುವ ಎಲ್ಲ ಜಮೀನುಗಳನ್ನು ಅಧಿಕಾರಕ್ಕೆ ಬಂದ ಸರ್ಕಾರಗಳು ಈ ನೆಲಗಳ್ಳರಿಗೆ ವಹಿಸಿಬಿಟ್ಟು ಅವರಿಚ್ಛೆ ಬಂದಂತೆ ಧಾರಾಳವಾಗಿ ಅವರು ಲೂಟಿ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಿ ಕೊಟ್ಟರು. ನಂತರ ಜಿವಿಕೆ ರಾವ್ ಸಮಿತಿಯನ್ನು ಮಾಡಿದರು. ಅವರು ಬಹಳ ಪವಿತ್ರವಾಗಿ ಪರಿಣಾಮಕಾರಿಯಾಗಿ ಚೆನ್ನಾಗಿ ವರದಿ ಕೊಟ್ಟಿದ್ದಾರೆ. ಆದರೆ ಆ ವರದಿಯನ್ನು ಸರ್ಕಾರ ಮೂಲೆಗುಂಪು ಮಾಡಿದೆ. ೮೮ ಸಾವಿರ ಜನರಿಗೆ ನಿವೇಶನ ಕೊಡುವುದಕ್ಕೆ ಆಗುತ್ತಿಲ್ಲ. ಇವರ ಪ್ರಕ್ರಿಯೆಯಲ್ಲಿ ನನಗೆ ನಂಬಿಕೆ ಇಲ್ಲ. ಆದ್ದರಿಂದ ದಯಮಾಡಿ ಈ ೮೮ ಸಾವಿರ ಜನರಿಗೆ ಕೂಡಲೇ ನಿವೇಶನ ಒದಗಿಸಬೇಕು. ಇವರಲ್ಲಿ ಅನೇಕರು ತಾಳಿ ಮಾರಿ ಹಣ ಕಟ್ಟಿರುವಂತಹ ಶೋಚನೀಯ ಪರಿಸ್ಥಿತಿ ಇದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ಅಧ್ಯಕ್ಷರೇ ನಾವು ಐದುನೂರು ಸಾವಿರ ನಿವೇಶನಕ್ಕೆ ಅರ್ಜಿ ಕರೆದದ್ದು. ಆದರೆ ೮೬ ಸಾವಿರ ಜನ ಅರ್ಜಿ ಹಾಕಿದ್ದಾರೆ. ಆದ್ದರಿಂದ ೮೬ ಸಾವಿರ ಜನರಿಗೂ ನಿವೇಶನ ಕೊಡಲು ಸಾಧ್ಯವಿಲ್ಲ. ೫೫೦೦ ಜನರಿಗೆ ನಿವೇಶನ ಹಂಚಲು ಬಿಡಿಎ ಅವರು ಬದ್ಧರು. ಅರ್ಜಿ ಹಾಕಿದವರಿಗೆಲ್ಲ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ೧೫ ಸಾವಿರ ಎಕರೆ ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯವಾದಾಗ ಒಂದು ಎಕರೆಗೆ ೪೦/೬೦ ಆದರೆ ೧೫ ನಿವೇಶನಗಳು ಸಿಗುತ್ತದೆ ಆ ಲೆಕ್ಕದಲ್ಲಿ ನಿವೇಶನ ಹಂಚಲು ಬಿಡಿಎ ಮತ್ತು ಸರ್ಕಾರ ಎಲ್ಲ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.